(ಇ) ಅಂಥ ಹಸುಗಳನ್ನು ನಮ್ಮ ರೈತರಿಗೆ ಸಾಕಲು ಕೊಡಲಾಗುವುದೆ,

(ಈ) ಅವುಗಳಿಂದ ನಮ್ಮ ರಾಜ್ಯದಲ್ಲಿ ಮಿಶ್ರ ತಳಿಗಳನ್ನು ಉತ್ಪಾದಿಸಲಾಗುವುದೆ,

(ಉ) ಈ ಕಾರ್ಯಕ್ರಮಕ್ಕಾಗಿ ಏನಾದರೂ ಸರ್ಕಾರದವರು ವ್ಯವಸ್ಥೆ ಮಾಡುವರೆ ?

**ಶ್ರೀ ಸಿದ್ದರಾಮಯ್ಯ** (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಮಂತ್ರಿಗಳು).

(ಅ) ಹೌದು, ಈಗ ಸದ್ಯ ರಾಜ್ಯಕ್ಕೆ ಗೊತ್ತುಮಾಡಿದ ಹಸುಗಳ ಸಂಖ್ಯೆಯನ್ನು ಹೇಳಲ ಸಾಧ್ಯವಿಲ್ಲದಿದ್ದರೂ ಬಹುಶಃ ಮೊದಲನೆಯ ಕಂತಾಗಿ ೬೦೦ ಹಸುಗಳನ್ನು ತದನಂತರ ೧೦೦೦ ಹಸುಗಳನ್ನು ಗೊತ್ತು ಮಾಡುವ ನಿರೀಕ್ಷೆ ಇದೆ. ಒಂದು ಹಸುವಿನ ಅಂದಾಜು ಬೆಲೆ ರೂ. ೫.೫೦೦–೦೦

(ಆ) ಮಾಡಲಾಗಿದೆ,

(ಇ) ಕೊಡಲಾಗುವುದು.

(ಈ) ಮಿಶ್ರತಳಿ ಅಥವಾ ಶುದ್ಧ ತಳಿಯ ಉತ್ಪಾದನೆಯ ಆವಶ್ಯಕತೆಯ ಮೇಲೆ ನಿರ್ಧರಿಸಲಾಗುವುದು.

(ಉ) ಹೌದು.

## ಬಿಜಾಪುರದಲ್ಲಿ ಪಿ. ಜಿ. ಸೆಂಟರ್‌ಗಳನ್ನು ತೆರೆಯುವುದು

೧೫೫೧. **ಶ್ರೀ ಜಿ. ಎಸ್. ಬಾಗಲಕೋಟೆ** (ಜಮಖಂಡಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬಿಜಾಪುರದಲ್ಲಿ ಸ್ನಾತಕೋತ್ತರ ವಿಭಾಗವನ್ನು ಪ್ರಾರಂಭಿಸಲು ಜನರ ಬೇಡಿಕೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಆ) ಅದನ್ನು ಪ್ರಾರಂಭಿಸಲು ವಿಜಾಪುರದಲ್ಲಿ ಎಲ್ಲಾ ತರದ ಅನುಕೂಲತೆಗಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ, ಬಿಜಾಪುರದಲ್ಲಿ ಸದರಿ ವಿಭಾಗವನ್ನು ಈ ವರ್ಷದಿಂದಲೇ ಪ್ರಾರಂಭ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

**ಶ್ರೀ ಎಂ. ರಘುಪತಿ** (ಶಿಕ್ಷಣ ಸಚಿವರು).—

(ಅ) ಹೌದು.

(ಆ) ಸರಿಯಾದ ಅನುಕೂಲತೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

(ಇ) ಸಾಧ್ಯವಿಲ್ಲ.

## ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ತೆರೆದಿರುವ ಪಶುವೈದ್ಯ ಚಿಕಿತ್ಸಾಲಯಗಳನ್ನು ಸರ್ಕಾರ ವಹಿಸಿಕೊಳ್ಳುವುದು

೧೫೫೨. **ಶ್ರೀ ಕೆ. ಕೆಂಪೇರೇಗೌಡ** (ಚಾಮರಾಜ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಮೈಸೂರು ಜಿಲ್ಲೆಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯು ಆಡಳಿತಕ್ಕೊಳಪಟ್ಟಿರುವ ಗ್ರಾಮೀಣ ಪಶುವೈದ್ಯ ಚಿಕಿತ್ಸಾಲಯಗಳೆಷ್ಟು,

(ಆ) ಆ ಪಶುವೈದ್ಯ ಚಿಕಿತ್ಸಾಲಯಗಳಲ್ಲಿ ಪಶುವೈದ್ಯರುಗಳಾಗಲಿ ಅಥವಾ ಜಾನುವಾರು ಪರಿವೀಕ್ಷರುಗಳಾಗಲೀ ಇರುವರೆ ಮತ್ತು ಚಿಕಿತ್ಸಾಲಯಗಳಿಗೆ ಔಷಧೋಪಕರಣಗಳನ್ನು ಒದಗಿಸಲಾಗಿದೆಯೇ ?